ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಕೆಲಸ ನಡೆಯುತ್ತಿದೆ. ಸೆಪ್ಟೆಂಬರ್ ಒಳಗೆ ಕೆಲಸ ಮುಗಿಯುವ ನಿರೀಕ್ಷೆ ಮಾಡಿದ್ದೇವೆ ಆದಷ್ಟು ಬೇಗ ಕೆಲಸ ಮುಗಿಸುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಎಸ್ ಹೆಚ್. ಕೌಜಲಗಿ.—೨,೯೪,೦೦೦ ರೂಪಾಯಿಗಳನ್ನು ಎರಡು ವರ್ಷದೊಳಗೆ ಟ್ರಕ್ಕಿನಿಂದ ನೀರು ಸರಬರಾಜು ಮಾಡವುದಕ್ಕೆ ಕೊಟ್ಟಿದ್ದಾರೆ. ಇದರಿಂದ ಎಷ್ಟು ಸ್ಪೀಡಾಗಿ ಕೆಲಸ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಪ್ರತಿಯೊಂದು ಊರಿನಲ್ಲೂ ಇದೇರೀತಿ ನಡೆದಿದೆ, ಏತಕ್ಕೆ ಎಂಬುದನ್ನು ತಿಳಿದುಕೊಳ್ಳಬೇಕು. ೨,೯೪,೦೦೦ ರೂಪಾಯಿಗಳನ್ನು ಟ್ರಕ್ಕಿನ ಸಲುವಾಗಿ ಎರಡು ವರ್ಷದೊಳಗೆ ಖರ್ಚು ಮಾಡುತ್ತಾರೆ. ಆದರೆ ೩ ಲಕ್ಷ ರೂಪಾಯಿ ಖರ್ಚು ಮಾಡಿದ್ದರೆ ಕೆಲಸ ಮುಗಿಸಬಹುದಾಗಿತ್ತು ಎಲ್ಲಾ ಕಡೆಯೂ ಹೀಗೆ ನಡೆದಿದೆ ಎನ್.ಆರ್.ಡಬ್ಲ್ಯೂ. ಕೆಲಸವನ್ನು ಸೂಪರ್‌ವೈಸ್ ಮಾಡುವವರು ಯಾರು ಇಲ್ಲ ಅದರ ಬಗ್ಗೆ ಕೇಳುವವರು ಹೇಳುವವರು ಯಾರೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ.— ಮಾನ್ಯ ಸದಸ್ಯರು ಅಪಾದನೆ ಮಾಡುವುದಾದರೆ ನನಗೆ ಸರಿಯಾದ ಮಾಹಿತಿಯನ್ನು ಕೊಟ್ಟರೆ ನಾನು ತನಿಖೆ ಮಾಡಿಸುತ್ತೇನೆ. ಕೊಳವೆ ಬಾವಿ ತೃಪ್ತಿ ಆಗಿದೆ ಎಂದು ಹೇಳಿದ್ದೇವೆ. ಕೆಲಸ ನಡೆದ ಬಗ್ಗೆಯೂ ಹೇಳಿದ್ದೇವೆ. ವಿಳಂಬ ಆಗುವುದಕ್ಕೆ ಅಧಿಕಾರಿಗಳ ನೆಗ್ಲಿಜಿಯನ್ಸ್ ಕಾರಣವಾಗಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಚೌಕಶಿ ಮಾಡಿಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ —ಅಧ್ಯಕ್ಷರೇ...

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಮೂರು ಸಾರಿ ನಾನು ಅವಕಾಶ ಕೊಟ್ಟಿದ್ದೇನೆ. ಮತ್ತೇ ನಾಲ್ಕನೆ ಸಾರಿ ಕೇಳುತ್ತಿದ್ದೀರಿ. ನಾನು ಮೊದಲೇ ಎರಡು ಸಾರಿಗಿಂತ ಹೆಚ್ಚಿಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದೇನೆ. ಸ್ವಾಮಿರಾವ್ ಅವರಿಗೂ ಮೂರು ಸಾರಿ ಕೊಟ್ಟಿದ್ದೇನೆ. ನಿಮಗೂ ಕೊಟ್ಟಿದ್ದೇನೆ. ಈಗ ಮುಂದಿನ ಪ್ರಶ್ನೆಯನ್ನು ವಲ್ಲಾರಿಗೌಡರ ಪರವಾಗಿ ಖರ್ಗೆಯವರು ಕೇಳಿ,

"ಕೂಲಿಗಾಗಿ ಕಾಳು" ಯೋಜನೆಯಲ್ಲಿ ಅವ್ಯವಹಾರವಾಗಿರುವುದು

೧೮೫೭. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಪ್ರತಿಯೊಂದು ಮಂಡಲ್ ಪಂಚಾಯತಿಗೆ ''ಕೂಲಿಗಾಗಿ ಕಾಳು'' ಯೋಜನೆಯಲ್ಲಿ ಎಷ್ಟು ಟನ್ನಿನಷ್ಟು ಗೋಧಿ ಹಾಗೂ ಅಕ್ಕಿಯನ್ನು ಕೊಡಲಾಗಿದೆ (ಮಂಡಲವಾರು ವಿವರ ಹಾಗೂ ಕೊಟ್ಟಿರುವ ದಿನಾಂಕದ ವಿವರ ನೀಡುವುದು)

ಆ) ಕೂಲಿಗಾಗಿ ಕಾಳು ಯೋಜನೆಯ ಕಾರ್ಯಕ್ರಮದಲ್ಲಿ ಕೂಲಿಕಾರರಿಗೆ ಕಾಳು ಕೊಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಬೆಳಗಾವಿ ಜಿಲ್ಲೆಗೆ ಕೂಲಿಗಾಗಿ ಕಾಳು ಯೋಜನೆಗಾಗಿ ಕೊಟ್ಟಿರುವ ಕಾಳಿನ ದುರ್ವ್ಯವಹಾರದಲ್ಲಿ ತೊಡಗಿರುವ ಅಪರಾಧಿಗಳನ್ನು ಗುರುತಿಸಲು ಸಿ.ಐ.ಡಿ. ತನಿಖೆಗೆ ಒಪ್ಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ, ಹಾಗಿದ್ದಲ್ಲಿ ಯಾವಾಗ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ದಿನಾಂಕ ೩೧-೧೨-೧೯೮೭ರಂದು ಹುಕ್ಕೇರಿ ತಾಲ್ಲೂಕು ಮಂಡಲ್ ಪಂಚಾಯತಿಗಳಿಗೆ ಈ ಕೆಳಕಂಡಂತೆ ಅಕ್ಕಿ ಹಾಗೂ ಗೋಧಿಯನ್ನು ಕೊಟ್ಟಿರುತ್ತದೆ.

ಕ್ರಮ ಸಂಖ್ಯೆ	ಮಂಡಲ ಪಂಚಾಯಿತಿಯ ಹೆಸರು	(ಪ್ರಮಾಣ ಮೆ.ಟನ್‌ಗಳಲ್ಲಿ) ಗೋಧಿ	ಅಕ್ಕಿ
೧	ಅಮ್ಮಣಗಿ	೨೦	...
೨	ದಡ್ಡಿ	೨೦	...
೩	ಹಿಡಕೆಲ್	೨೦	...
೪	ಯಮಕನಮರಡಿ	೨೦	
೫	ಬೆಳವಿ	೨೦	...
೬	ನಿಡಸೋಸಿ	೨೦	...
೭	ಬೆಲ್ಲದ ಬಾಗೇವಾಡಿ	೨೦	...
೮	ಬಡಕುಂದ್ರಿ	೨೦	...
೯	ಉ. ಖಾನಾಪುರ	೨೦	...
೧೦	ಗುಡಸ	೨೦	...
೧೧	ಬುಗಟಿ ಅಲೂರು	೨೦	...
೧೨	ಪಾಚ್ಚಾಪುರ	೨೦	...
೧೩	ಸೋಲ್ಲಾಪುರ	೨೦	...
೧೪	ಯಲಿಮುನೆಕೊಳ್ಳಿ	೨೦	...
೧೫	ಸುಲ್ತಾನಪುರ	೨೦	...
೧೬	ಕಣಗಲಾ	೨೦	...
೧೭	ಬಸಾಪುರ	೨೦	...
೧೮	ಇಸ್ಲಾಂಪೂರ	೨೦	೧೦
೧೯	ಹೆಬ್ಬಾಳ	೨೦	...
೨೦	ಮನಗುತ್ತಿ	೨೦	...

ಆ) ಇಲ್ಲ.

ಇ) ಇದರ ಬಗ್ಗೆ ಜಿಲ್ಲಾ ಪರಿಷತ್ ವರದಿ ತೆಗೆದುಕೊಂಡ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— (ಶ್ರೀ ಮಲ್ಲಾರಿಗೌಡ ಪಾಟೀಲರ ಪರವಾಗಿ) —ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆ ಬೆಳಗಾವಿ ಜಿಲ್ಲೆಗೆ ಕೂಲಿಗಾಗಿ ಕಾಳು ಯೋಜನೆಗಾಗಿ ಕೊಟ್ಟಿರುವ ಕಾಳಿನ ದುರ್ಬಳಕೆಯಾಗಿರುವ ಬಗ್ಗೆ ತೊಡಗಿರುವ ಅಪರಾಧಿಗಳನ್ನು ಗುರುತಿಸಲು ಸಿ.ಒ.ಡಿ ತನಿಖೆ ನಡೆಸುತ್ತೀರಾ ಎಂದು. ಅದಕ್ಕೆ ವರದಿ ಜಿಲ್ಲಾಪರಿಷತ್ತಿನಿಂದ ಇನ್ನೂ ಬಂದಿಲ್ಲ. ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನಾನು ಕೇಳತಕ್ಕದ್ದು ಇಷ್ಟೆ. ಸಿ.ಒ.ಡಿ. ವಿಚಾರಣೆಯನ್ನು ಸಮಗ್ರವಾಗಿ ಮಾಡಿಸಬೇಕು. ಏಕೆಂದರೆ ಇವರು ಒಂದು ಜಿಲ್ಲೆ ಬಗ್ಗೆ ಕೇಳಿದ್ದಾರೆ. ಆದರೆ

ಅನೇಕಕಡೆ ಇದೇ ರೀತಿ ಯಾಗಿದೆ. ಎಲ್ಲೆಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಅಂತ ಕೆಡೆ ಸಿ.ಓ.ಡಿ. ರಿಪೋರ್ಟ್ ತರಿಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ ? ತೆಗೆದುಕೊಂಡ ಮೇಲೆ ಈ ಸದನಕ್ಕೆ ತಿಳಿಸುತ್ತೀರಾ ? ಇದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಹುಕ್ಕೇರಿ ತಾಲ್ಲೂಕಿನಲ್ಲಿ ಕೂಲಿಗಾಗಿ ಕಾಳು ವಿತರಣೆಯನ್ನು ಜಿಲ್ಲಾ ಪರಿಷತ್ ಮುಖಾಂತರವಾಗಿ ಮಂಡಲ ಪಂಚಾಯಿತಿ ಸೆಕ್ರೆಟರಿ ಮಾಡಿದ್ದಾರೆ. ಈ ಬಗ್ಗೆ ಸಿ.ಓ.ಡಿ. ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದಾರೆ. ಅದು ಸಾಧ್ಯವಿಲ್ಲ. ಏಕೆಂದರೆ ಇದರ ಬಗ್ಗೆ ಜಿಲ್ಲಾ ಪರಿಷತ್ತಿನವರಿಗೆ ಎನ್‌ಕ್ವೈರಿ ಮಾಡಲು ಹೇಳುತ್ತೇವೆ. ಅಲ್ಲಿಂದ ಎನ್‌ಕ್ವೈರಿ ರಿಪೋರ್ಟ್ ಬಂದಮೇಲೆ ಅದನ್ನು ಸದನದ ಗಮನಕ್ಕೆ ತರುತ್ತವೆ. ಯಾರು ತಪ್ಪಿತಸ್ಥರಿದ್ದಾರೆ ಅವರ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಂದು ಭರವಸೆ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಿಲ್ಲಾ ಪರಿಷತ್ತಿನಲ್ಲಿರತಕ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಜೂನಿಯರ್ ಇಂಜಿನಿಯರ್ ಮೇಲೆ ಆಪಾದನೆ ಇಡುವಾಗ ಅವರಿಗೇ ಎನ್‌ಕ್ವೈರಿ ಮಾಡುವುದಕ್ಕೆ ಹಾಕಿದರೆ ನಿಷ್ಪಕ್ಷಪಾತವಾದ ವಿಚಾರಣೆ ಆಗುವುದಿಲ್ಲ. ಏಕೆಂದರೆ ಅವರು ರಕ್ಷಣೆ ಮಾಡುತ್ತಾರೆ. ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕಾದರೆ ಸಿ.ಓ.ಡಿ. ವಿಚಾರಣೆ ಮಾಡಿಸಿ. ಇದರಲ್ಲಿ ಏನಾಗಿದೆ ಎಂಬುದು ಗೊತ್ತಾಗುತ್ತದೆ. ಇನ್ನು ಮುಂದೆ ಮಾಡತಕ್ಕವರಿಗೂ ಭಯ ಉಂಟಾಗುತ್ತದೆ. ಏನಾದರೂ ಮಿಸ್ ಅಪ್ರೊಪ್ರಿಯೇಷನ್ ಮಾಡಿದರೆ, ಲಂಚ ಹೊಡೆದರೆ ಸರ್ಕಾರ ಬಿಡುವುದಿಲ್ಲ. ನಮ್ಮನ್ನು ಕೇಳುವವರು ಒಬ್ಬರಿದ್ದಾರೆ ಎಂದು ಅವರಿಗೆ ಅನ್ನಿಸುತ್ತದೆ.

ಸಿ–ಸಿ ಪಿ. ಎಂ.

ನಾಳೆ ಜಿಲ್ಲಾ ಪರಿಷತ್ತಿನ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಹಾಗೆ ಮಾಡುತ್ತಾರೆ. ನಾವು ಮಾಡಿದ್ದೇ ಸರಿ ಎನ್ನುವ ಭಾವನೆ ಅವರಲ್ಲಿ ಬರುತ್ತದೆ. ಇದರ ಬಗ್ಗೆ ಸಿಓಡಿ ಎನ್‌ಕ್ವೈರಿ ಮಾಡಿಸಿ. ಇದರಿಂದ ತೊಂದರೆ ಏನಿಲ್ಲ. They will be investigating only agianst the officers. Why you are afraid ? Unless the Government is involved, there is nothing wrong with the enquiry. ನೀವು ಏತಕ್ಕೆ ತನಿಖೆಗೆ ಹಿಂಜರಿಯುತ್ತೀರಿ ?

ಅಧ್ಯಕ್ಷರು.—ಅವರು ಹೇಳುವುದರಲ್ಲಿ ನೂರಕ್ಕೆ ನೂರು ಸತ್ಯ ಇದೆ. Many of top officers are shielding the subordinate officers. There are hundreds of instances. Please examine his suggestion. ಇದನ್ನು ವಿಚಾರ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ತಾವು ಹೇಳಿದ್ದಕ್ಕೆ ನಾನು ಗೌರವವನ್ನು ಕೊಡುತ್ತೇನೆ. ಇದರಲ್ಲಿ ಸಿಓಡಿ ಎನ್‌ಕ್ವೈರಿ ಅವಶ್ಯಕ ಇಲ್ಲ. ಹುಕ್ಕೇರಿ ತಾಲ್ಲೂಕಿನ ಬಗ್ಗೆ ಅವರು ಹೇಳುತ್ತಿದ್ದಾರೆ. ಆಲ್ಲಿನ ಅಧಿಕಾರಿಗಳ ತನಿಖೆ ಬೇಡ ಎನ್ನುವುದಾದರೆ ಅಲ್ಲಿನ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರ ಕಡೆಯಿಂದ ತನಿಖೆ ಮಾಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಸಿಓಡಿ ಬಗ್ಗೆ ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳೇ ಮೋಸ ಮಾಡಿದ್ದಾರೆಂದ ಮೇಲೆ ಮತ್ತೆ ಅಲ್ಲಿಯ ಅಧಿಕಾರಿಯಿಂದಲೇ ಮಾಡಿಸುತ್ತೇವೆಂದರೆ ಏನು ಅರ್ಥ ಅಲ್ಲಿ ತಾವಿದ್ದೂ ಮಾಡುವುದೇ, ನಾವಿದ್ದೂ ಮಾಡುವುದೇ. Instead of getting enquired by the Chief Secretary, Z. P. entrust the enquiry to C. O. D.

ಅಧ್ಯಕ್ಷರು.—ಪರಿಶೀಲನೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಪೀಕರ್ ಅವರು ಹೇಳಿದರೂ ಗೌರವ ಕೊಡುವುದಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ನಿಮ್ಮ ಕಾಲದಲ್ಲೂ ನಡೆದಿದೆ, ಅವರ ಕಾಲದಲ್ಲೂ ನಡೆದಿದೆ. ಇದು ಬಿಡಿ.

SRI R. V. DESHAPANDE.—If the Hon'ble Speaker directs me I will do it. I will bow down. ಪ್ರಶ್ನೆ ಏನೆಂದರೆ ನೇರವಾಗಿ ಇವನೇ ಅಧಿಕಾರಿ ಮಾಡಿದ್ದಾನೆಂದು ಇಲ್ಲ. ಆ ತಾಲ್ಲೂಕಿನಲ್ಲಿ ಸ ಕಪ್ಪು ಮಂಡಲಗಳು ಇವೆ. ಆ ಮಂಡಲಗಳಿಗೆ ಗೋಧಿ, ಅಕ್ಕಿ ವಿತರಣೆ ಆಗಿದೆ. ಇಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂದು ಹೇಳಿದ್ದಾರೆಯೇ ಹೊರತು ನೇರವಾಗಿ ಇಂತಹ ಅಧಿಕಾರಿಯೇ, ಇಂತಹ ಮಂಡಲದಲ್ಲಿಯೇ ಇದು ಆಗಿದೆ ಎಂದು ಹೇಳಿಲ್ಲ. ಇದನ್ನು ಹೇಳದೇ on the vague allegations, If I refer it to C. O. D., it will not be proper.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಪೆಸಿಫಿಕ್ಕಾಗಿ ೨೦ ಮಂಡಲಗಳ ಬಗ್ಗೆ ವಿವರಣೆಯನ್ನು ನೀವೇ ಕೊಟ್ಟಿದ್ದೀರಿ. That is why, to know the truth, we are asking for C. O. D. Enquiry. ಎಂದರೆ ಎಲ್ಲಾ ಕೆಲಸ ಬಿಟ್ಟು ನಾವೇ ಸಿಓಡಿ ಕೆಲಸ ಮಾಡುವುದಕ್ಕಾಗುತ್ತದೆಯೇ ? It is our duty to bring to the notice of the Government about the irregularities committed by the officers. ಅಧ್ಯಕ್ಷರೇ, ಇದನ್ನು ಸಿಓಡಿಗೆ ರೆಫರ್ ಮಾಡಲಿ. ಇದರಲ್ಲಿ ಗೌರವದ ಪ್ರಶ್ನೆ ಏನಿದೆ ? ನೀವು ಸಿಓಡಿ ರೆಫರ್ ಮಾಡಿದರೆ ಮುಂದಿನವರಿಗೆ ಭಯ ಹುಟ್ಟುತ್ತದೆ. ಆದುದರಿಂದ We are asking for C. O. D. enquiry to the extent of Hukkeri taluk only. please entirust the enquiry to the C. O. D., we are not asking for the entire division. Only with regard to Hukkeri, where mis-utilisation and misappropriation of food grains have taken place, we are asking for C. O. D. enquiry. ಒಂದು ತಾಲ್ಲೂಕಿಗೆ ಏಕೆ ಆಗುವುದಿಲ್ಲ ? ಆದರಲ್ಲಿ ಕೇವಲ ೨೦ ಹಳ್ಳಿಗಳು ಇವೆ.

ಅಧ್ಯಕ್ಷರು.—ಅವರ ಸಲಹೆಯನ್ನು ಎಕ್ಸಾಮಿನ್ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ಅವರ ಸಲಹೆಯನ್ನು ಎಕ್ಸಾಮಿನ್ ಮಾಡುತ್ತೇನೆ.

ಆ. ಮುಂದೂಡಲಾದ ಪ್ರಶ್ನೆಗಳು.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ, ನಿನ್ನೆ ಪಟ್ಟಿಯಿಂದ ಮುಂದೂಡಲಾದ ಮಾನ್ಯ ಬಿ. ಲಕ್ಕಪ್ಪನವರ ಪ್ರಶ್ನೆ ೧೬೩ನ್ನು ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಯವರಿಗೆ ಕೇಳಿ.

ಆಕ್ಟ್ರಾಯ್ ಹಾಗೂ ವಾಹನ ತೆರಿಗೆಗಳ ಪರಿಹಾರ ಕೊಡುವ ವಿಚಾರ.

೧೬೩. ಶ್ರೀ ಬಿ. ಲಕ್ಕಪ್ಪ.— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೪೬-೪೭ ಮತ್ತು ೧೯೪೭-೪೮ನೇ ಸಾಲಿನಲ್ಲಿ ರಾಜ್ಯದಲ್ಲಿ ನಗರಸಭೆ ಹಾಗೂ ಪುರಸಭೆಗಳಿಗೆ ಸರ್ಕಾರದವರು ಕೊಡಬೇಕಾದ ಆಕ್ಟ್ರಾಯ್ ಹಾಗೂ ವಾಹನ ತೆರಿಗೆಗಳ ಪರಿಹಾರ ಧನವನ್ನು ಸಂದಾಯ ಮಾಡದೆ ಇರುವುದು ನಿಜವೆ ?

ಆ) ಹಾಗಿದ್ದಲ್ಲಿ ಹಣ ಸಂದಾಯವಾಗಿಲ್ಲದಿರುವ ನಗರಸಭೆ ಹಾಗೂ ಪುರಸಭೆಗಳಷ್ಟು ? (ತಾಲ್ಲೂಕುವಾರು ಪೂರ್ಣ ವಿವರ) ಮತ್ತು ಈ ವಿಳಂಬಕ್ಕೆ ಕಾರಣಗಳೇನು ?

ಶ್ರೀ ಎಂ. ಚಂದ್ರಶೇಖರಿಂ (ನಗರಾಭಿವೃದ್ಧಿ ಸಚಿವರು).—

ಅ) ೧೯೪೬-೪೭ ರಲ್ಲಿ ನಾಲ್ಕು ಕಂತುಗಳಲ್ಲಿ ಮತ್ತು ೧೯೪೭-೪೮ರಲ್ಲಿ ೨ ಕಂತುಗಳಲ್ಲಿ ಆಕ್ಟ್ರಾಯ್ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಅದೇ ರೀತಿ ವಾಹನ ತೆರಿಗೆ ಪರಿಹಾರ ಧನವನ್ನು ಸಹ ಪ್ರತಿ ವರ್ಷ. ದಿನಾಂಕ ೨೪-೩-೪೦ರ ಸರ್ಕಾರಿ ಆದೇಶದಲ್ಲಿ ಗೊತ್ತುಪಡಿಸಿದ ರೀತಿಯಲ್ಲೆ ಬಿಡುಗಡೆ ಮಾಡಲಾಗಿದೆ.